ಸಿ.ಸಿ..ನಂ.85-24

ಪಿ.ಡಬ್ಲ್ಯೂ-1

ದಿನಾಂಕ.24-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** **ಆರೋಪಿ ಪರ ಶ್ರೀ ಆರ್ ಟಿ ಜಿ ವಕೀಲರಿಂದಃ**

1. ಅರೋಪಿಗೆ ಸಾಲ ಕೊಟ್ಟಾಗ ಪಿರ್ಯದಿದಾರರ ಸಂಸ್ಥೆ ಯಲ್ಲಿ ನೀವು ಕೆಲಸಕ್ಕೆ ಸೇರಿ ಕೊಂಡಿರಲಿಲ್ಲ ಎಂದರೆ ನಾನು ಅದೇ ಸಂಸ್ದೆಯಲ್ಲಿ ರಿಕವರಿ ಆಫೀಸರ ಅಗಿ ಕೆಲಸದಲ್ಲಿ ಇದ್ದೆ . ಸಾಲಗಾರರಿಗೆ ಸಾಲ ಕೊಡುವ ಪೂರ್ವದಲ್ಲಿ ಅವರು ನಮ್ಮ ಸಂಸ್ಥೆಯ ಸದಸ್ಯನಾಗಿರುವುದು ಕಡ್ಡಾಯವಾಗಿರುತ್ತದೆ . ಸದ್ರಿ ನ್ಯಾಯಾಲಯದ ಮುಂದೆ ಇರುವ ಅರೋಪಿಯು ನಮ್ಮ ಸಂಸ್ಥೆಯಲ್ಲಿ ಸದಸ್ಯರಾಗಿದ್ದರು . ಆರೋಾಪಿಯು ಶಾಶ್ವತ ಅಥವಾ ತಾತ್ಕಾಲಿಕ ಯಾವ ಸದಸ್ಯನಾಗಿದ್ದನು ಎಂದು ನನಗೆ ನೆನಪಿಲ್ಲ . ಸದ್ರಿ ಅರೋಾಪಿಯ ಸದಸ್ಯತ್ವ ದ ನಂಬರ ನನಗೆ ನೆನಪಿಲ್ಲ. ನಿಪಿ-10 ನಮ್ಮ ಸಂಸ್ಥೆಯ ಆರೋಪಿಯ ಖಾತೆಯ ಖಾತಾ ಉತಾರ ವಾಗಿರುತ್ತದೆ . ನಿಪಿ-10 ಕ್ಕೆ ಪುಟ ಸಂಖ್ಯೆ 151 ಎಂದು ನಮೂದು ಇರುತ್ತದೆ ಎಂದರೆ ಹೌದು . ಸಾಲದ ಖಾತಾ ಉತಾರ ಒಂದು ರಜಿಸ್ಟರದಲ್ಲಿ ಇರುತ್ತದೆ ಎಂದರೆ ಸರಿ . ನನ್ನ ಪ್ರಕಾರ ಆರೋಪಿಗೆ ಖಾತಾ ಉತಾರನಂತೆ ರೂ 5 ಲಕ್ಷ ಸಾಲ ಕೊಡಲಾಗಿರುತ್ತದೆ . ಖಾತಾ ಉತಾರದಲ್ಲಿ ಸಾಲಗಾರನಿಗೆ ಎಷ್ಟು ಖಾತಾ ಸಾಲ ಇರುತ್ತದೆ ಮತ್ತು ಎಷ್ಟು ಅದಕ್ಕೆ ಬಡ್ಡಿ ಮತ್ತು ದಂಡದ ಬಡ್ಡಿ ಎಷ್ಟು ಎಂದುನಮೂದು ಮಾಡುತ್ತೀರಿ ಎಂದರೆ ಸಂಸೆಗೆ ಅವಶ್ಯಕತೆ ಇರುವ ಮಾಹಿತಿಗಳನ್ನು ಮಾತ್ರ ಅದರಲ್ಲಿ ನಮೂದು ಮಾಡುತ್ತೇವೆ . ಖಾತಾ ಉತಾರದಲ್ಲಿ ಬಡ್ಡಿ , ದಂಡ ಬಡ್ಡಿ ನಮೂದು ಮಾಡಲು ತೊಂದರೆ ಇಲ್ಲ ಎಂದರೆ ನಮ್ಮ ಸಂಸ್ದೆಯ ನಿಯಮಾವಳಿಯಂತೆ ಸದ್ರಿ ಖಾತಾ ಉತಾರದಲ್ಲಿ ಬರುವ ಕಾಲಂ ಬರ್ತಿ ಮಾಡುತ್ತಾ ಹೋಗುತೇವೆ . ನಿಪಿ-10 ಖಾತಾ ಉತಾರ ನೀವು ಬರೆದದ್ದು ಅಲ್ಲ ಎಂದರೆ ಅದು ಯಥಾ ಪ್ರತಿ ಯಾಗಿರುತ್ತದೆ . ಸದ್ರಿ ಯಥಾ ಪ್ರತಿಯನ್ನು ನಮ್ಮ ಸಂಸ್ಥೆಯ ಸಿಬ್ಬಂದಿಗಳು ಬರೆದಿರುತ್ತಾರೆ . ಸದ್ರಿ ಖಾತಾ ಉತಾರದಲ್ಲಿ ಸರಿಯಾಗಿ ಬರೆಯದೆ ಇರುವುದರಿಂದ ಅರೋಾಪಿಗೆ ಎಷ್ಟು ಸಾಲ , ಎಷ್ಟು ಬಡ್ಡಿ ,ಎಷ್ಟು ದಂಡ ಬಡ್ಡಿ ವಿಧಿಸಿರುತ್ತಾರೆ ಎಂಬ ಬಗ್ಗೆ ನಿಮಗೆ ಸರಿಯಾದ ಮಾಹಿತಿ ಇಲ್ಲ

ಎಂದರೆ ಸರಿಯಲ್ಲ .ನಿಪಿ-10 ರಲ್ಲಿ ವ್ಯವಸ್ಥಾಪಕರ ಮತ್ತು ಬರೆದವರ ಸಹಿ ಇಲ್ಲ ಎಂದರೆ ವ್ಯವಸ್ಥಾಪಕರ ಸಹಿ ಇರುತ್ತದೆ . ಸಾಮಾನ್ಯವಾಗಿ ಲೆಡ್ಜರ ದಲ್ಲಿ ಬರೆದವರ ಸಹಿ ಇರಬೇಕಾಗುತ್ತದೆ ಎಂದರೆ ಮೂಲ ದಾಖಲಾತಿಯಲ್ಲಿ ಪಾಸಿಂಗ ಆಫೀಸರ್ ರವರ ಸಹಿ ಇರುತ್ತದೆ ಬರೆದವರ ಸಹಿ ಇರುವುದಿಲ್ಲ .

2. ನಮ್ಮ ಸಂಸ್ದೆ.ಯಲ್ಲಿ ಕಂಪ್ಯಟರ ಇರುತ್ತದೆ . ನಮ್ಮ ಸಂಸ್ಥೆಯಲ್ಲಿ ಈಗ ಎಲ್ಲಾ ಕಂಪ್ಯಟರದಲ್ಲಿ ಎಂಟ್ರಿ ಮಾಡುತ್ತೇವೆ . ಕೈಬರವಣಿಗೆ ಹಾಗೂ ಕಂಪ್ಯೂಟರ ಎಂಟ್ರಿ ಎರಡು ಕೂಡ ಇರುತ್ತದೆ . ಅಂದಿನ ದಿನದ ವ್ಯವಹರಣೆಯ ಎಂಟ್ರಿಯನ್ನು ಅದೆ ದಿನವೆ ಕಂಪ್ಯೂಟರದಲ್ಲಿ ಮಾಡಬೇಕಾಗುತ್ತದೆ ಎಂದರೆ ಸರಿ . ಆದರೆ ಲೆಡ್ಜರ ಮತ್ತು ಸಾಲಗಾರನ ಇತರ ದಾಖಲಾತಿಗಳಲ್ಲಿ ಯಾವಾಗ ಬೇಕಾದರೂ ಬರೆಯಬಹುದು ಎಂದರೆ ಆ ತರಹ ಇಲ್ಲ ದಿನದ ವ್ಯವಹಾರವನ್ನು ಡೇ ಬುಕ ದಲ್ಲಿ ಸಂಗ್ರಹಿಸಲಾಗುತ್ತದೆ .ಆ ದಿನ ಬರಬೇಕಾದ ಚೆಕ ನ ಹಣವನ್ನು ನಿಮ್ಮ ಲೆಡ್ಜರದಲ್ಲಿ ತೋರಿಸಿರುತ್ತೀರಾ ಎಂದರೆ ಅರೋಪಿಯು ಬರೆದು ಕೊಟ್ಟ ಚೆಕ ನ್ನು ನಾವು ಬ್ಯಾಂಕಿಗೆ ಹಾಜರ ಪಡಿಸುತ್ತೇವೆ .ನಿಪಿ-10 ರಲ್ಲಿ 3,66,166/- ಎಂದು ದಿಃ 22-2-2021 ಕ್ಕೆ ಬಾಕಿ ಉಳಿದ ಮೊತ್ತ ಎಂದು ನಮೂದು ಮಾಡಿರುತ್ತೀರಿ ಎಂದರೆ ಹೌದು .ಸಾಕ್ಷಿ ಪುನಃ ಮುಂದುವರೆದು ಆದರೆ ಚೆಕ ನ್ನು ಅರೋಪಿಯು ದಿಃ9-2-2021 ಕ್ಕೆ ನೀಡಿರುತ್ತಾರೆ .ನೀವು ಲೆಡ್ಜರ ದಲ್ಲಿ ದಾಖಲಿಸಿದ ಮೊತ್ತಕ್ಕಿಂತ 13 ದಿನಗಳ ಮೊದಲು ಅರೋಪಿಯು ಚೆಕ ನ್ನು ಕೊಟ್ಟಿರುತ್ತಾನೆ ಎಂದರೆ ಹೌದು . ನನ್ನ ಪ್ರಕಾರ ಅದು ಹೌದು .ಲೆಡ್ಜರ ದಲ್ಲಿ ದಾಖಲಿಸಿದ ಮೊತ್ತಕ್ಕಿಂತಲೂ ಕಡಿಮೆ ಮೊತ್ತವನ್ನು ಚೆಕ ದಲ್ಲಿ ಕಾಣಿಸಲಾಗಿರುತ್ತದೆ ಎಂದರೆ ಅರೋಪಿಯು ಹಣ ಮರು ಪಾವತಿಸುತ್ತೇನೆ ಎಂದು ಮೊದಲೇ ಚೆಕ ನ್ನು ದಿಃ9-2-2021 ರಂದು ನೀಡಿರುತ್ತಾನೆ . ಲೆಡ್ಜರ ದಲ್ಲಿರುವ ಬಾಕಿ ಮೊತ್ತದ ಹಣ ದಿಃ22-2-2021 ಆಗಿರುತ್ತದೆ . ಆದಿನದ ಮೊತ್ತಕ್ಕೆ ಅದು ಅಷ್ಟು ಬೆಲೆನ್ಸ ಇರುತ್ತದೆ . ನೀವು ಲೆಡ್ಜರ ದಲ್ಲಿ ಕಾಣಿಸಿದ ಮೊತ್ತಕ್ಕಿಂತಲೂ ಅರೋಪಿಯು ಮೊದಲೆ ಕಡಿಮೆ ಮೊತ್ತದ ಚೆಕ ನ್ನು ಕೊಟ್ಟಿರುವುದರಿಂದ ಅದನ್ನು ನೀವು ನಿಮ್ಮ ಲೆಡ್ಜರ ದಲ್ಲಿ ದಾಖಲಿಸಬೇಕಾಗಿತ್ತು ಎಂದರೆ ಸರಿಯಲ್ಲ .

**3**. ನಿಪಿ-10 ರ ಲೆಡ್ಜರ ದಲ್ಲಿ ಬಡ್ಡಿ ನಮೂದಿಸಲು ಅದಕ್ಕೆ ಒಂದು ಪ್ರತ್ಯೇಕವಾದ ಕಾಲಂ ಇರುತ್ತದೆ ಎಂದರೆ ಇಲ್ಲ. ನಿಪಿ-10 ನ್ನು ನಿವೇ ಸೃಷ್ಟಿಸಿಕೊಂಡದ್ದು ಎಂದರೆ ಸರಿಯಲ್ಲ . ನಿಮ್ಮ ಪ್ರಕಾರ ಅರೋಪಿ ಪಿರ್ಯಾದೆ ಸಂಸ್ಥೆಗೆ ಅರ್ಜಿ ಸಲ್ಲಿಸಿದ ದಿನಾಂಕದಂತೆ ಸಾಲ ಕೊಡುತ್ತೀರಾ ಎಂದರೆ ಅರ್ಜಿಯನ್ನು ಕಮಿಟಿ ಸದಸ್ಯರ ಮುಂದೆ ಸಲ್ಲಿಸಿ

ಸಭೆ ಕರೆದು ನಂತರ ತಿರ್ಮಾನಿಸಲಾಗುತ್ತದೆ . ಅರೋಪಿಗೆ ರೂ 5 ಲಕ್ಷ ಸಾಲ ನಮ್ಮ ಸಂಸ್ಥೆಯಿಂದ ಕೊಡಲಾಗಿರುತ್ತದೆ . ನನ್ನ ಪ್ರಕಾರ ಆತನ ಸಾಲದ ಖಾತೆಯ ಖರ್ಚನ್ನು ಹಾಕಿ ಆತನದ್ದೆ ಆದ ಉಳಿತಾಯ ಖಾತೆಗೆ ಜಮಾ ಮಾಡಿ ವೋಚರ ದಲ್ಲಿ ಸಹಿ ಪಡೆದಿರುತ್ತೇವೆ . ಆರೊಪಿಯ ಉಳಿತಾಯ ಖಾತೆಗೆ ಆ ದಿನ ಹಣ ಜಮಾ ಮಾಡಿದ್ದ ಬಗ್ಗೆ ದಾಖಲಾತಿ ಇರುತ್ತದೆಯಾ ಎಂದರೆ ಆ ದಿನ ಉಳಿತಾಯ ಮತ್ತು ಖರ್ಚು ಆ ದಿನದ ವ್ಯವಹಾರಕ್ಕೆ ಅನುಗುಣವಾಗಿರುತ್ತದೆ . ಆರೋಪಿಗೆ ಹಣ ಕೊಟ್ಟ ಬಗ್ಗೆ ರಶೀದಿ ಪಡೆದು ಕೊಂಡಿರುತ್ತೀರಾ ಎಂದರೆ ಅವರು ನಮ್ಮ ಸಂಸೇಯಿಂದ ಇರುವ ವಿತ್ ಡ್ರಾವಲ ಸ್ಲಿಪ ಮೇಲೆ ಸಹಿ ಹಾಕಿ ಹಣ ಪಡೆದು ಕೊಂಡಿರುತ್ತಾರೆ ಅದರ ವೋಚರ ನಮ್ಮ ಬಳಿ ಇರುತ್ತದೆ . ಸದ್ರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದೀರಾ ಎಂದರೆ ಅದನ್ನು ABN ಪ್ರಕರಣದಲ್ಲಿ ಹಾಜರ ಪಡಿಸಲಾಗಿದೆ ಅವಶ್ಯ ಇದ್ದರೆ ಹಾಜರ ಪಡಿಸುತ್ತೇನೆ . ಸಾಲ ಮಂಜೂರಾದ ಹಣದ ಬಗ್ಗೆ ನಿಮ್ಮ ಹೆಡ ಆಫೀಸವಾದ ಬೆಂಗಳೂರಿಗೆ ಅದನ್ನು ಆ ಕೂಡಲೆ ಕಳುಹಿಸಿ ಕೊಡಬೇಕಾಗುತ್ತದೆ ಎಂದರೆ ಆ ಕೂಡಲೆ ಕಳುಹಿಸಿಕೊಡಬೇಕು ಎಂದುಇಲ್ಲ ವರ್ಷಕ್ಕೊಮ್ಮೆ ಅಡಾವಿ ಪತ್ರಿಕೆ ಗೆ ಅವರು ಹೇಳಿದ ವಿಳಾಸಕ್ಕೆ ಕಳುಹಿಸಿ ಕೊಡುತ್ತೇವೆ . ಆ ರೀತಿ ಸಲ್ಲಿಸಿದ ಪ್ರತಿ ನಿಮ್ಮ ಬ್ಯಾಂಕ ಕಚೇರಿಯಲ್ಲಿ ಇರುತ್ತದೆ ಎಂದರೆ ಸರಿ . ಆ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದು ಇಲ್ಲ ಎಂದರೆ ಇಲ್ಲ . ಅವಶ್ಯ ಇದ್ದರೆ ಹಾಜರ ಪಡಿಸುತ್ತೇನೆ . ನಿಪಿ–7 ರಲ್ಲಿ ಹೇಳಿದಂತೆ ಅರೋಪಿಯು ಸಾಲ ಪಡೆದು ಕೊಂಡದ್ದು ಇಲ್ಲ ಆ ಕಾರಣದಿಂದ ಆ ದಾಖಲಾತಿ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ .

4. ನಿಪಿ–8 ಒಂದು ಕರಾರು ಪತ್ರ ಎಂದರೆ ಸರಿ . ಸದ್ರಿ ನಿಪಿ–8 ನ್ನು ಕಾನೂನು ಬದ್ದವಾಗಿ ಮಾಡಿಕೊಂಡದ್ದು ಅಲ್ಲ ಎಂದರೆ ಸರಿಯಲ್ಲ . ಯಾವುದೆ ಒಂದು ಕರಾರು ಮಾಡಬೇಕಾದರೆ ಅದರ ಹಣದ ಮೌಲ್ಯಕ್ಕೆ ಒಂದು ಛಾಪಾ ಕಾಗದದ ಮೇಲೆ ಅಥವಾ ರಜಿಷ್ಟ್ರೇಷನ ಮೂಲಕ ಅದನ್ನು ಮಾಡಿ ಕೊಳ್ಳಬೇಕಾಗುತ್ತದೆ ಎಂದರೆ ನಮ್ಮ ಸಂಸ್ಥೆ.ಯಲ್ಲಿರುವ ನಿಯಮಾವಳಿ ಪ್ರಕಾರ ನಾವು ಕರಾರು ಪತ್ರದ ಮೇಲೆ ಅವರ ಸಹಿ ಪಡೆದು ಕೊಂಡು ಕರಾರ ನ್ನು ಮಾಡಿಸಿ ಕೊಳ್ಳುತ್ತೇವೆ . ಸಾಮಾನ್ಯವಾಗಿ ಯಾವುದೆ ಒಂದು ಕರಾರು ಮಾಡಬೇಕಾದರೆ ಛಾಪಾ ಕಾಗದ ಮೂಲಕ ಮಾಡಿಕೊಂಡು ಅದನ್ನು ರಜಿಷ್ಟ್ರೇಷನ ಮಾಡಿಕೊಳ್ಳಬೇಕಾಗುತ್ತದೆ ಎಂದರೆ ಅದರ ಮಾಹಿತಿ ಇಲ್ಲ . ಹಾಗಿದ್ದ ಕರಾರು ಮಾತ್ರ ಕಾನೂನು ಬದ್ದ ಕರಾರು ಆಗುತ್ತದೆ ಎಂದರೆ ಇದು ಕೂಡ ಕಾನೂನು ಬದ್ದ ಕರಾರು

ಆಗಿರುತ್ತದೆ . ನಿಪಿ–8 ಕರಾರು ಪತ್ರ ಅಲ್ಲ ಎಂದರೆ ಸರಿಯಲ್ಲ . ನಿಪಿ–1 ನ್ನು ಅರೋಪಿ ಬರೆದು ಕೊಂಡು ನಮ್ಮ ಬ್ಯಾಂಕಿಗೆ ಬಂದಿರುತ್ತಾನೆ . ಅದನ್ನು ನಿಮ್ಮ ಸಂಸ್ಥೆ.ಯಲ್ಲಿ ಬಂದು ಬರೆದು ಕೊಟ್ಟಿರುತ್ತಾನಾ ಅಥವಾ ಹೋರಗಿನಿಂದ ಬರುವಾಗಲೆ ಬರೆದು ಕೊಂಡು ಬಂದಿರುತ್ತಾನೊ ಎಂದರೆ ಅದರ ಬಗೆ ಮಾಹಿತಿ ಇಲ್ಲ ಆದರೆ ಬರ್ತಿ ಮಾಡಿದ ಚೆಕ ನ್ನು ನಮ್ಮ ಸಂಸ್ಥಯ ಮ್ಯಾನೇಜರ ಬಳಿ ಕೊಟ್ಟಿರುತ್ತಾನೆ . ಅದನ್ನು ನೀವು ನೋಡಿದ್ದು ಇಲ್ಲ ಎಂದರೆ ಅರೋಪಿಯು ಚೆಕ ನ್ನು ತಂದಾಗ ಬರ್ತಿಯಾದ ಚೆಕ ಆಗಿತ್ತು .

5. 2010 ರಿಂದ RTGS ಮತ್ತು Neft ವ್ಯವಹಾರ ಜಾರಿಗೆ ಬಂದವು ಎಂದರೆ ನನಗೆ ಮಾಹಿತಿ ಇಲ್ಲ . ಸದ್ರಿ RTGS and Neft ಜಾರಿಗೆ ಬಂದ ಮೇಲೆ ಪ್ರತಿಯೊಂದು ಚೆಕ ಮೇಲೆ MICR ಕೋಡಗಳು ಕಡ್ಡಾಯ ವಾಗಿ ಇಡಬೇಕು ಎಂದು ಜಾರಿಗೆ ಬಂದಿತು ಎಂದರೆ ನನಗೆ ಮಾಹಿತಿ ಇಲ್ಲ . ಒಂದಾನು ವೇಳೆ ಆ ರೀತಿಯಾದ MICR ಕೋಡ ಗಳು ಇರದೆ ಇದ್ದ ಚೆಕ ಗಳನ್ನು ವ್ಯವಹಾರಿಸಬಾರದು ಎಂದು ಸರಕಾರದಿಂದ ಸುತ್ತೋಲೆ ಇತ್ತು ಎಂದರೆ ಅದುಬೇರೆ ಬ್ಯಾಂಕಿಗೆ ಸಂಬಂಧಿಸಿದ ಚೆಕ ಆಗಿರಬಹುದು ಅದರ ಬಗ್ಗೆ ನನಗೆ ಮಾಹಿತಿ ಇಲ್ಲ . ನಮ್ಮ ಸಂಸ್ಥೆ.ಯಲ್ಲಿ ಅರೋಪಿ ನೀಡಿದ ಚೆಕನ್ನು ಪರಿಶೀಲಿಸಿ ನೋಡಿ ತೆಗೆದುಕೊಂಡಿರುತ್ತೇವೆ. ಯಾವುದೆ ಸಾಲಗಾರ ತನ್ನ ಸಾಲದ ಖಾತೆಗೆ ಸಂಬಂಧಿಸಿದಂತೆ ಚೆಕ ನ್ನು ಕೊಡುವಾಗ ಒಂದಾನು ವೇಳೆ ಚೆಕ ಗಳು invalid ಇದ್ದಲ್ಲಿ ಅಂತಹ ಚೆಕ ಗಳು ನಮಗೆ ಬೇಡ valid ಇರುವ ಚೆಕ ನಮಗೆ ಕೊಡಿ ಎಂದು ನೀವು ಕೇಳಬಹುದು ಎಂದರೆ ಆದರೆ ಅತನು ಸದ್ರಿ ತನ್ನ ಖಾತೆಯಲ್ಲಿ ಸಾಕಷ್ಟು ಹಣ ಇದೆ ಮತ್ತು ಈ ಚೆಕನ್ನು ಹಾಜರ ಪಡಿಸಿ ಹಣ ತೆಗೆದು ಕೊಳ್ಳಿ ಎಂದು ಹೇಳಿದ ಕಾರಣ ನಾವು ಆ ಚೆಕನ್ನು ಪಡೆದಿರುತ್ತೇವೆ . ಒಂದು ವೇಳೆ invalid ಚೆಕ ಇದ್ದಲ್ಲಿ ಅಂತಹ ಚೆಕ ಗಳು ನಮಗೆ ಬೇಡ valid ಅಗಿರುವ ಚೆಕ ನಮಗೆ ಕೊಡಬೇಕು ಎಂದು ನಿಮಗೆ ಹೇಳಲು ತೊಂದರೆ ಇತ್ತಾ ಎಂದರೆ ನನ್ನ ಪ್ರಕಾರ ಅದು valid ಚೆಕ ಅಗಿರುತ್ತದೆ . ಸಾಕ್ಷಿ ಪುನಃ ಮುಂದುವರೆದು ಈ ಬಗ್ಗೆ ಬ್ಯಾಂಕಿನವರು ಸದ್ರಿ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಹಿಂಬರಹ ಕೊಟ್ಟಿರುತ್ತಾರೆ ಒಂದುವೇಳೆ ಅದು invalid ಆಗಿದ್ದರೆ ಅದೇ ಕಾರಣವನ್ನು ಹಿಂಬರಹದಲ್ಲಿ ಬ್ಯಾಂಕ ನವರು ನಮೂದಿಸುತ್ತಿದ್ದರು . ನಾನು ನಮ್ಮ ಸಂಸ್ಥೆ ಯಲ್ಲಿ 2016 ರಿಂದ ವಸೂಲಾತಿ ಅಧಿಕಾರಿ ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಹಾಗಾಗಿ ನಿಮಗೆ ಈ ಚೆಕ ಬಗ್ಗೆ ಸಾಮಾನ್ಯವಾದ ಜ್ಞಾನ ಇರುತ್ತದೆ ಎಂದರೆ ಸರಿ . ಯಾವ ಆಧಾರದಲ್ಲಿ ಈ ಚೆಕ valid ಚೆಕ ಎಂದು

ಹೇಳುತ್ತೀರಿ ಎಂದರೆ  ಆರೋಪಿಯು ಸದ್ರಿ ಚೆಕ valid ಚೆಕ ಎಂದು ಹೇಳಿ ತಂದು ಕೊಟ್ಟಿದ್ದರು ಆ ಕಾರಣದಿಂದ ಆ ಚೆಕ ನ್ನು ಬ್ಯಾಂಕಿಗೆ ಹಾಜರ ಪಡಿಸುವುದು ನಮ್ಮ  ಕರ್ತವ್ಯ ವಾಗಿತ್ತು ಹಾಗಾಗಿ ಅದು insufficient ಎಂದು ಬಂದಿರುತ್ತದೆ .

6. ನಿಮ್ಮ ಪ್ರಕಾರ SBM ಬ್ಯಾಂಕ SBI ಆಗಿ ಯಾವ ದಿನಾಂಕ ದಂದು ವಿಲೀನ ಗೊಂಡಿರುತ್ತದೆ ಎಂದು ನಿಮಗೆ ಗೊತ್ತಿರುತ್ತದೆಯಾ ಎಂದರೆ ಇಲ್ಲ . ಸದ್ರಿ SBM ಬ್ಯಾಂಕ ದಿಃ1-4-2017 ರಂದು ಮರ್ಜ ವಾಗಿರುತ್ತದೆ ಎಂದರೆ ನನಗೆ ದಿನಾಂಕ ನೆನಪಿಲ್ಲ. ಸದ್ರಿ SBM ಬ್ಯಾಂಕ ಮರ್ಜ ವಾಗಿರುವುದರಿಂದ ಕೇವಲ ದಿಃ1-4-2017 ರಿಂದ 31-12-2017 ರವರೆಗೆ ಮಾತ್ರ SBM ಚೆಕ ಗಳು  validity ಯಲ್ಲಿ ಇದ್ದವು ಎಂದು ಸುತ್ತೋಲೆ ಪ್ರಕಟಿಸಲಾಗಿತ್ತು . ಅದು ಎಲ್ಲಾ ದಿನಪತ್ರಿಕೆಯಲ್ಲಿ ಪ್ರಕಟವಾಗಿತ್ತು ಹಾಗೂ ಬ್ಯಾಂಕ ನಲ್ಲೂ ಅದರ ಬಗ್ಗೆ ಫಲಕ ಹಾಕಿದ್ದರು ಎಂದರೆ    ಹಾಗಿದ್ದಲ್ಲಿ ಸದ್ರಿ ಬ್ಯಾಂಕ ನವರು invalid ಚೆಕ ಎಂದು ಹಿಂಬಹರ ಕೊಡುತ್ತಿದ್ದರು ಆದರೆ ಸದ್ರಿ ಈ ಪ್ರಕರಣದ ಚೆಕ funds insufficient ಎಂಬ ಹಿಂಬಹರ ದೊಂದಿಗೆ ವಾಪಸ್ಸು ಬಂದಿರುತ್ತದೆ . ಸಾಕ್ಷಿ ಪುನಃ ಮುಂದುವರೆದು ನಮ್ಮ ಸಂಸ್ಥೆಗೆ  ಮೋಸ ಮಾಡುವ ಉದ್ದೇಶದಿಂದ ಲೆ ಅರೋಪಿ ಸದ್ರಿ ಚೆಕ ಕೊಟ್ಟಿರುತ್ತಾನೆ .  ಸದ್ರಿ SBM ಬ್ಯಾಂಕ SBI ಬ್ಯಾಂಕಿಗೆ  ಮರ್ಜ ವಾದ  ನಂತರ 3 ವರ್ಷದ 10 ತಿಂಗಳ ಬಳಿಕ ಸದ್ರಿ ಚೆಕ ನ್ನು ನಿಮ್ಮ ಬ್ಯಾಂಕಿಗೆ  ಹಾಜರ ಪಡಿಸಿರುತ್ತಿರಿ ಎಂದರೆ ಸರಿಯಲ್ಲ . ಹಾಗಾಗಿ ಆ ಚೆಕ ಮಾನ್ಯತೆ ಇಲ್ಲದೆ ಇರುವ ಚೆಕ ಆಗಿರುತ್ತದೆ ಎಂದರೆ ಸರಿಯಲ್ಲ .ನಿಮ್ಮ ಪ್ರಕಾರ ಅರೋಪಿಯು ದಿಃ 31-12-2017 ರ ನಂತರ  ನೀಡಿರುವ ಚೆಕ ಅಸ್ತಿತ್ವ ದಲ್ಲಿ ಇರಲಿಲ್ಲ ಎಂದರೆ  ಸರಿಯಲ್ಲ . ಈ ಪ್ರಕಣಕ್ಕೆ ಸಂಬಂಧಿಸಿದಂತೆ ದರಕಾಸ್ತು ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಸರಿ . ಸಾಕ್ಷಿ ಪುನಃ ಮುಂದುವರೆದು ಅದು ಇದೆ ನ್ಯಾಯಾಲಯದಲ್ಲಿ ಇರುತ್ತದೆ ಅದರ ನಂಬರ ನೆನಪಿಲ್ಲ.ಸದ್ರಿ ಪ್ರಕರಣದಲ್ಲಿ ಅರೋಪಿಯು ಯಾವುದೆ  ಸಾಲ ವನ್ನು ಮಾಡಿದ್ದೆ ಇಲ್ಲ ಎಂದರೆ ಸರಿಯಲ್ಲ .  ಅರೋಪಿಗೆ ತೊಂದರೆ ಕೊಡುವ ಉದ್ದೆಶದಿಂದ ಸದ್ರಿ ಪ್ರಕರಣ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ .

7. ನಿಮ್ಮ ಬ್ಯಾಂಕಿಗೆ  ಈ ಹಿಂದೆಯೂ ಸಾಲ ಕೊಟ್ಟಿರುತೀರಿ ಎಂದರೆ ಸರಿ .  ಈ ಹಿಂದೆ ಸಾಲ ಕೊಡುವಾಗ ಅರೋಪಿ ಕಡೆಯಿಂದ 4 ಖಾಲಿ ಚೆಕ ಪಡೆದುಕೊಂಡಿರುತ್ತೀರಿ ಎಂದರೆ ಸರಿಯಲ್ಲ . ಆ  valid ಇಲ್ಲದ  ಚೆಕ

ಗಳನ್ನು ದೂರಪಯೋಗ ಪಡಿಸಿಕೊಂಡು ನಿಮಗೆ ಬೇಕಾದ ಹಾಗೆ ಹಣ ವನ್ನು ಅದರಲ್ಲಿ ಬರೆದುಕೊಂಡು ನ್ಯಾಯಾಲಯಕ್ಕೆ ಹಾಜರ ಪಡಿಸಿ ಸುಳ್ಳು ರುಜುವಾತು ಮಾಡಲು ಹೊರಟಿರುತ್ತೀರಿ ಎಂದರೆ ಸರಿಯಲ್ಲ . ಆರೋಪಿಯು ನಿಮ್ಮ ಸಂಸ್ಥೆಯಿಂದ ರೂ 5 ಲಕ್ಷ ಸಾಲ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . ಅದರ ಮರು ಪಾವತಿಗಾಗಿ ಚೆಕ ನ್ನು ಸಹ ನೀಡಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಪುನಃ ಮುಂದುವರೆದು ಅರೋಪಿಯು ನ್ಯಾಯಾಲಯದ ಮುಂದೆ ರಾಜಿ ಮಾಡಿಕೊಳ್ಳುತ್ತೆನೆ ಎಂದು ಸಾಕಷ್ಟು ಬಾರಿ ಸಮಯ ಪಡೆದುಕೊಂಡಿರುತ್ತಾನೆ ಎಂದರೆ ಸರಿಯಲ್ಲ . ಅರೋಪಿ ಮೇಲೆ ಒತ್ತಡ ಹೇರಿ ಈ ಪ್ರಕರಣ ದಾಖಲಿಸಿದ್ದು ಎಂದರೆ ಸರಿಯಲ್ಲ . ನಿಪಿ–1 ರಿಂದ 10 ಈ ಪ್ರರಣಕ್ಕೆ ಸಂಬಂಧಿಸಿದ ದಾಖಲಾತಿ ಅಲ್ಲ ಎಂದರೆ ಸರಿಯಲ್ಲ . ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅರೋಪಿಗೆ ಯಾವುದೆ ನೋಟಿಸು ಜಾರಿಯಾಗಿಲ್ಲ ಎಂದರೆ ಸರಿಯಲ್ಲ . ಒಂದಾನು ವೇಳೆ ಅರೋಪಿಗೆ ನೋಟಿಸು ಜಾರಿಯಾಗಿದ್ದಲ್ಲಿ ಸ್ವಿಕೃತಿ ಪತ್ರ ನ್ಯಾಯಾಲಯದ ಮುಂದೆ ಇರುತ್ತಿತ್ತು ಎಂದರೆ ಅಂಚೆ ಇಲಾಖೆಯವರು ನೀಡಿದ ದಾಖಲಾತಿ ಯನ್ನು ನ್ಯಾಯಾಲಯದ ಮುಂದೆ ಹಾಜರ ಪಡಿಸಿದ್ದೇನೆ ಮತು ಸದ್ರಿ ನೋಟಿಸನ್ನು ಅರೋಪಿ ತೆಗೆದುಕೊಂಡಿದ್ದ ಬಗ್ಗೆ ದಾಖಲಾತಿ ಸಹ ನೀಡಿದ್ದೇನೆ . ಈ ಹಿಂದೆ ಮಾಡಿದ ಸಾಲಕ್ಕೆ ಸಂಬಂಧಿಸಿದಂತೆ ಅರೊಪಿ ಕಡೆಯಿಂದ ಬದ್ರತೆಗಾಗಿ 4 ಚೆಕ ಪಡೆದುಕೊಂಡಿದ್ದು ಅದನ್ನೆ ದೂರುಪಯೋಗ ಪಡಿಸಿಕೊಂಡು ಸದ್ರಿ ಚೆಕ invalid ಆದರೂ ಸಹ 4 ವರ್ಷ ಗಳ ನಂತರ ಸುಳ್ಳು ಪ್ರಕರಣ ದಾಖಲಿಸಿರುತ್ತಿರಿ ಎಂದರೆ ಸರಿಯಲ್ಲ . ಸುಳ್ಳು ದಾಖಲಾತಿಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂರೆ ಸರಿಯಲ್ಲ . ಅರೋಪಿಯು ಯವುದೆ ಕಾರಣಕ್ಕೂ ಈ ಪ್ರಕರಣದಲ್ಲಿರುವ ಚೆಕ ನ್ನು ಕೊಟ್ಟಿದ್ದು ಇಲ್ಲ ಎಂದರೆ ಸರಿಯಲ್ಲ . ಅರೋಪಿಗೂ ಈ ಪ್ರಕರಣಕ್ಕೂ ಯಾವುದೆ ಸಂಬಂದ ಇಲ್ಲ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅಂಕೋಲಾ.